## ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಸಿ1(4)(5)ಪ್ರೌಶಿಮುಶಿವರ್ಗ/3/2020-21 ದಿನಾಂಕ:10/12/2021

**ಜ್ಞಾಪನ**

**ವಿಷಯ:** ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ಗ್ರೂಪ್-ಬಿ ವೃಂದದ ಬೆಂಗಳೂರು ಮತ್ತು ಮೈಸೂರು ವಿಭಾಗದ ವರ್ಗಾವಣಾ ಕೌನ್ಸಿಲಿಂಗ್ ಕುರಿತು.

**ಉಲ್ಲೇಖ:** ಈ ಕಛೇರಿಯ ಜ್ಞಾಪನ ಸಂಖ್ಯೆ.ಶಿವಕೋಶಸಾವ/1/2020-21 ದಿನಾಂಕ:25/11/2020.

******

ವಿಷಯದನ್ವಯ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ಗ್ರೂಪ್-ಬಿ ವೃಂದದ ಬೆಂಗಳೂರು ಹಾಗೂ ಮೈಸೂರು ವಿಭಾಗದ ವರ್ಗಾವಣಾ ಕೌನ್ಸಿಲಿಂಗ್ ವೇಳಾಪಟ್ಟಿಯನುಸಾರ ದಿನಾಂಕ:16/12/2021ರಿಂದ ನಡೆಯಲಿದ್ದು ಬೆಂಗಳೂರು ಮತ್ತು ಮೈಸೂರು ವಿಭಾಗಕ್ಕೆ ಸಂಬಂದಪಟ್ಟಂತೆ ಈ ಹಿಂದೆ ಬೆಂಗಳೂರು ಆಯುಕ್ತಾಲಯದ ಕಛೇರಿಯಲ್ಲಿ ಅಭ್ಯರ್ಥಿಗಳು ಕೌನ್ಸಿಲಿಂಗ್‌ಗೆ ಹಾಜರಾಗಬೇಕಾಗಿತ್ತು.

ಪ್ರಸ್ತುತ, ತಾಂತ್ರಿಕ ವ್ಯವಸ್ಥೆಯನ್ನು ಸಮರ್ಪಕವಾಗಿ ಬಳಸಿಕೊಂಡು ಅಭ್ಯರ್ಥಿಗಳಿಗೆ ಅನುಕೂಲ ಕಲ್ಪಿಸುವ ಉದ್ಧೇಶದಿಂದ, ತಂತ್ರಾಂಶವನ್ನು ಸಜ್ಜುಗೊಳಿಸಲಾಗಿದೆ. ಕೌನ್ಸಿಲಿಂಗ್‌ನ್ನು ಕೇಂದ್ರೀಕೃತ ಮಾದರಿಯಲ್ಲಿ ಒಂದೇ ಸ್ಥಳದಲ್ಲಿ ಹಮ್ಮಿಕೊಳ್ಳುವ ಬದಲಿಗೆ ಆಯಾ ಜಿಲ್ಲೆಗೆ ಸಂಬಂಧಪಟ್ಟ ಅಭ್ಯರ್ಥಿಗಳು ಅದೇ ಜಿಲ್ಲೆಯ ಉಪ ನಿರ್ದೇಶಕರವರ ಕಛೇರಿಯಲ್ಲಿ ಹಾಜರಾಗಲು ಅನುವು ಮಾಡಿದೆ. ಅದರಂತೆ, ಅಭ್ಯರ್ಥಿಗಳು ಆಯಾ ಜಿಲ್ಲೆಯ ಉಪನಿರ್ದೇಶಕರ ಕಛೇರಿಯಲ್ಲಿಯೇ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಹಾಜರಾಗಿ ಝೂಮ್ ಮೀಟ್ ಮಾದರಿಯಲ್ಲಿ ಪಾಲ್ಗೊಂಡು ವಿಭಾಗದ ಯಾವುದೇ ಖಾಲಿ ಹುದ್ದೆಯನ್ನು ನಿಯಮಾನುಸಾರ ಆಯ್ಕೆ ಮಾಡಿಕೊಳ್ಳತಕ್ಕದ್ದು. ಈ ಬಗ್ಗೆ ಆಯಾ ಉಪ ನಿರ್ದೇಶಕರು ಕೌನ್ಸಿಲಿಂಗ್‌ಗೆ ಜಿಲ್ಲಾ ಪ್ರೋಗ್ರಾಮರ್‌ಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.

ಈಗಾಗಲೇ ದಿನಾಂಕ:09/12/2021 ರಂದು ದೈಹಿಕ ಶಿಕ್ಷಕರಿಂದ ತಾಲ್ಲೂಕು ದೈಹಿಕ ಪರಿವೀಕ್ಷಕರ ಬಡ್ತಿ ಕೌನ್ಸಲಿಂಗ್ ಅನ್ನು ಇದೇ ಮಾದರಿಯಲ್ಲಿ ಯಶಸ್ವಿಯಾಗಿ ಹಮ್ಮಿಕೊಂಡಿದ್ದು ಉಪನಿರ್ದೇಶಕರಿಗೆ ತಾಂತ್ರಿಕತೆಯ ಪರಿಚಯವಾಗಿರುತ್ತದೆ. ಈ ಕುರಿತಂತೆ ಉಪ ನಿರ್ದೇಶಕರಿಂದ ಹಿಮ್ಮಾಹಿತಿಯನ್ನು ಸಹ ಪಡೆಯಲಾಗಿದ್ದು ಜಿಲ್ಲಾ ಕೇಂದ್ರಗಳಲ್ಲಿಯೇ ವಿಭಾಗಮಟ್ಟದ ವರ್ಗಾವಣೆಯನ್ನು ಹಮ್ಮಿಕೊಳ್ಳಲು ತಂತ್ರಾಂಶವನ್ನು ಸಜ್ಜುಗೊಳಿಸಲಾಗಿದೆ. ಅದರಂತೆ ಬೆಂಗಳೂರು/ಮೈಸೂರು ವಿಭಾಗದ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ-ಬಿ ವೃಂದದ ವರ್ಗಾವಣೆಗಳನ್ನು ಪ್ರಾಧಿಕಾರಿಯವರ ನಿಗಾದಲ್ಲಿ ಜಿಲ್ಲಾ ಕೇಂದ್ರಗಳಿಂದ ನಿರ್ವಹಿಸಲಾಗುತ್ತದೆ.

ಈ ಬಗ್ಗೆ ಆಯಾ ಜಿಲ್ಲಾ ಉಪನಿರ್ದೇಶಕರು ವ್ಯಾಪ್ತಿಯ ಎಲ್ಲಾ ಮುಖ್ಯ ಶಿಕ್ಷಕರ / ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳ ಗಮನಕ್ಕೆ ಸ್ಥಳೀಯವಾಗಿ ವ್ಯಾಪಕವಾಗಿ ಪ್ರಚುರ ಪಡಿಸತಕ್ಕದ್ದು ಮತ್ತು ಸದರಿ

ವರ್ಗಾವಣಾ ಕೌನ್ಸಲಿಂಗ್ ದಿನಾಂಕಗಳಂದು ಆಯಾ ಉಪ ನಿರ್ದೇಶಕರ ಕಛೇರಿಯಲ್ಲಿ ಕೌನ್ಸಿಲಿಂಗ್ ಪ್ರಕ್ರಿಯೆಗೆ ಹಾಜರಾತಿಯನ್ನು ಖಾತ್ರಿ ಪಡೆಸಿಕೊಳ್ಳತಕ್ಕದ್ದು. ಉಪನಿರ್ದೇಶಕರು ಕೌನ್ಸಲಿಂಗ್ ದಿನಾಂಕಗಳಂದು ಹಾಜರಿದ್ದು ಪ್ರಕ್ರಿಯೆಯ ಮೇಲುಸ್ತುವಾರಿ ವಹಿಸತಕ್ಕದ್ದು. ಈ ಕೆಳಕಂಡ ವೇಳಾಪಟ್ಟಿಯಂತೆ ಗಣಕೀಕೃತ ಕೌನ್ಸಿಲಿಂಗ್ ಅನ್ನು ನಡೆಸಲಾಗುವುದು.

| ಕ್ರಸಂ | ದಿನಾಂಕ | ವರ್ಗಾವಣಾ ಪಟ್ಟಿಯ ಜೇಷ್ಠತಾ ಕ್ರಮ ಸಂಖ್ಯೆ | ಸಮಯ |
|---|---|---|---|
| 1 | 16/12/2021 | ಕ್ರ.ಸಂ. 1 ರಿಂದ 60 | ಪೂರ್ವಾಹ್ನ 09.00 ರಿಂದ |
| 2 | 16/12/2021 | ಕ್ರಸಂ.61 ರಿಂದ 120 | ಅಪರಾಹ್ನ 2.00 ರಿಂದ |
| 3 | 17/12/2021 | ಕ್ರಸಂ.121 ರಿಂ 180 | ಪೂರ್ವಾಹ್ನ 09.00 ರಿಂದ |
| 4 | 17/12/2021 | ಕ್ರಸಂ.181 ರಿಂದ | ಅಪರಾಹ್ನ 2.00 ರಿಂದ |

ಕೌನ್ಸಿಲಿಂಗ್ ದಿನಾಂಕದಂದು ಹಾಜರಾತಿ ಮತ್ತು ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡ ಸ್ಥಳದ ಬಗ್ಗೆ ದೃಢೀಕೃತ ವರದಿಯನ್ನು ಅದೇ ದಿನ ಈ ಕಛೇರಿಯ ಇ-ಮೇಲ್ **"est1cpi@gmail.com"** ವಿಳಾಸಕ್ಕೆ ಸಲ್ಲಿಸಲು ಆಯಾ ಜಿಲ್ಲಾ ಉಪ ನಿರ್ದೇಶಕರಿಗೆ ಸೂಚಿಸಿದೆ.

**"ಮಾನ್ಯ ಆಯುಕ್ತರ ಆದೇಶದ ಮೇರೆಗೆ"**

10/12/2021
ಡಾ.ರೂಪಶ್ರೀ.ಎಸ್, ಕೆ.ಎ.ಎಸ್,
ಜಂಟಿ ನಿರ್ದೇಶಕರು(ಆಡಳಿತ)

ಇವರಿಗೆ

ಬೆಂಗಳೂರು ಹಾಗೂ ಮೈಸೂರು ವಿಭಾಗದ
ಎಲ್ಲಾ ಉಪ ನಿರ್ದೇಶಕರು(ಆಡಳಿತ)(ಅಭಿವೃದ್ಧಿ)